# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **412** |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19-08-2026 |
| ಉತ್ತರಿಸುವ ಸಚಿವರು | : | ಇಂಧನ ಮತ್ತು ಪ್ರವಾಸೋದ್ಯಮ ಸಚಿವರು |

****

<table>
<tr><th>ಪ್ರಶ್ನೆ</th><th></th><th>ಉತ್ತರ</th></tr>
<tr><td>ಅ)</td><td>ಪಂಪ್ ಸೆಟ್ ಅಕ್ರಮ ಸಕ್ರಮ ಯೋಜನೆಗೆ ರಾಜ್ಯಾದ್ಯಂತ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು; ಅರ್ಜಿ ಸಲ್ಲಿಸುವ ಅವಧಿ ಏನು; (ಎಸ್ಕಾಂವಾರು ವಿವರ ನೀಡುವುದು);</td><td>ಪ್ರಸ್ತುತ ರಾಜ್ಯದಲ್ಲಿ ಅಕ್ರಮ ಸಕ್ರಮ ಯೋಜನೆ ಜಾರಿಯಲ್ಲಿ ಇರುವುದಿಲ್ಲ.<br><br>ರೈತರ ನೀರಾವರಿ ಪಂಪ್‌ಸೆಟ್‌ಗಳನ್ನು ವ್ಯವಸ್ಥಿತವಾಗಿ ವಿದ್ಯುತ್ ಜಾಲಕ್ಕೆ ಸೇರ್ಪಡೆಗೊಳಿಸಲು ಮತ್ತು Solar off grid / Stand-alone ಪಂಪ್‌ಗಳನ್ನು ಅಳವಡಿಸುವ ಮೂಲಕ ಹಗಲಿನ ವೇಳೆಯಲ್ಲಿಯೇ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸುವ ಉದ್ದೇಶದಿಂದ ದಿನಾಂಕ:07.10.2023 ರಂದು ಸರ್ಕಾರಿ ಆದೇಶ ಹೊರಡಿಸಲಾಗಿದ್ದು, ದಿನಾಂಕ 22.09.2023 ರ ಅಂತ್ಯಕ್ಕೆ ಎಲ್ಲಾ ವಿ.ಸ.ಕಂ. ಗಳ ವ್ಯಾಪ್ತಿಯಲ್ಲಿ 4.41 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಅರ್ಜಿ ಸಲ್ಲಿಕೆಯಾಗಿತ್ತು. ವಿವರ ಈ ಕೆಳಕಂಡಂತಿದೆ.<br><br>
<table>
<tr><td>MESCOM</td><td>30,104</td></tr>
<tr><td>BESCOM</td><td>1,39,034</td></tr>
<tr><td>CESC</td><td>23,587</td></tr>
<tr><td>GESCOM</td><td>9,881</td></tr>
<tr><td>HESCOM</td><td>2,38,471</td></tr>
<tr><td>ಒಟ್ಟು</td><td>4,41,077</td></tr>
</table></td></tr>
<tr><td>ಆ)</td><td>ಇಲ್ಲಿಯವರೆಗೆ ಎಷ್ಟು ಪಂಪ್ ಸೆಟ್‌ಗಳ ಸಂಪರ್ಕವನ್ನು ಸಕ್ರಮಗೊಳಿಸಲಾಗಿದೆ; ಉಳಿದ ಸಂಪರ್ಕಗಳನ್ನು ಎಷ್ಟು ದಿನಗಳಲ್ಲಿ ಸಕ್ರಮಗೊಳಿಸಲಾಗುವುದು; ಇದಕ್ಕಾಗಿ ವಿಧಿಸುತ್ತಿರುವ ಶುಲ್ಕವೆಷ್ಟು;</td><td>ವಿದ್ಯುತ್ ಸರಬರಾಜು ಕಂಪನಿವಾರು ಮೂಲಭೂತ ಸೌಕರ್ಯ ಕಲ್ಪಿಸಿರುವ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಬಾಕಿ ಇರುವ ಅರ್ಜಿಗಳ ವಿವರಗಳು ಕೆಳಕಂಡಂತಿವೆ.<br><br>
<table>
<tr><th>ವಿ.ಸ.ಕಂ.ಗಳು</th><th>ದಿನಾಂಕ 22.09.2023 ರ ಅಂತ್ಯಕ್ಕೆ ಇದ್ದ ಅರ್ಜಿಗಳ ಸಂಖ್ಯೆ</th><th>ಮೂಲಭೂತ ಸೌಕರ್ಯ ಕಲ್ಪಿಸಿರುವ ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ</th><th>ಮೂಲಭೂತ ಸೌಕರ್ಯ ಕಲ್ಪಿಸಲು ಬಾಕಿ ಇರುವ ಪಂಪ್‌ಸೆಟ್‌ಗಳ ಸಂಖ್ಯೆ</th></tr>
<tr><td>MESCOM</td><td>30,104</td><td>16,209</td><td>13,895</td></tr>
<tr><td>BESCOM</td><td>1,39,034</td><td>66,877</td><td>72,157</td></tr>
<tr><td>CESC</td><td>23,587</td><td>22,843</td><td>744</td></tr>
<tr><td>GESCOM</td><td>9,881</td><td>9,587</td><td>294</td></tr>
<tr><td>HESCOM</td><td>2,38,471</td><td>1,69,851</td><td>68,620</td></tr>
<tr><td>ಒಟ್ಟು</td><td>4,41,077</td><td>2,85,367</td><td>1,55,710</td></tr>
</table>
ಮೂಲಭೂತ ಸೌಕರ್ಯ ಕಲ್ಪಿಸಲು ಬಾಕಿ ಇರುವ ಕೃಷಿ ಪಂಪ್‌ಸೆಟ್‌ಗಳಿಗೆ ತ್ವರಿತವಾಗಿ ಮೂಲಭೂತ ಸೌಕರ್ಯವನ್ನು ಕಲ್ಪಿಸುವಂತೆ ವಿ.ಸ.ಕಂ.ಗಳಿಗೆ ಸೂಚಿಸಲಾಗಿದೆ.</td></tr>
</table>

**ಬಾಕಿ ಇರುವ IP set ಗಳಿಗೆ ಮೂಲಸೌಕರ್ಯ ರಚಿಸಲು ಕೈಗೊಂಡಿರುವ ಕ್ರಮ :**

- ಬಾಕಿಯಿರುವ 1,55,710 IP Set ಗಳ ಪೈಕಿ 30,039 IP Set ಗಳ ಕಾಮಗಾರಿ ಪ್ರಗತಿಯಲ್ಲಿದೆ.
- ಬೆಸ್ಕಾಂ ಹಾಗೂ ಮೆಸ್ಕಾಂ ವತಿಯಿಂದ 44,361 IP Set ಗಳಿಗೆ ಟೆಂಡರ್/ ಲೇಬರ್ ಕಾಂಟ್ರಾಕ್ಟ್ ಆಹ್ವಾನಿಸಲಾಗಿದೆ
- ಬೆಸ್ಕಾಂ ಹಾಗೂ ಹೆಸ್ಕಾಂ ವ್ಯಾಪ್ತಿಯಲ್ಲಿ ರೂ. 50/- ಅರ್ಜಿ ಶುಲ್ಕ ಮಾತ್ರ ಪಾವತಿಸಿ ಮೂಲಸೌರ್ಯ ರಚಿಸಬೇಕಾಗಿರುವ 81,310 ಸಂಖ್ಯೆ IP Set ಗಳಿಗೆ ಮೂಲಭೂತ ಸೌಕರ್ಯ ಮತ್ತು ಠೇವಣಿ ಶುಲ್ಕ ಪಾವತಿಸುವಂತೆ ತಿಳಿಸಲಾಗಿದ್ದು, ರೈತರು ಶುಲ್ಕ ಪಾವತಿಸಿದ ನಂತರ ಮೂಲಸೌಕರ್ಯ ರಚಿಸಲು ಕ್ರಮವಹಿಸಲಾಗುವುದು.

2011 ರ ಆದೇಶ ಮತ್ತು 2014ರ ಸುತ್ತೋಲೆಗಳನ್ವಯ ರೈತರು ಐ.ಪಿ ಸೆಟ್ ಗಳಿಗೆ ವಿದ್ಯುತ್ ಮೂಲಸೌಕರ್ಯಕ್ಕಾಗಿ KERC ನಿಯಮಾವಳಿಯಂತೆ ಕಾಲಕಾಲಕ್ಕೆ ಅನ್ವಯವಾಗುವ ಭದ್ರತಾ ಠೇವಣಿಯೊಂದಿಗೆ ಪಾವತಿಸಬೇಕಾಗಿದ್ದ ಶುಲ್ಕಗಳ ವಿವರಗಳು ಕೆಳಕಂಡಂತಿವೆ:

ಅರ್ಜಿ ನೋಂದಣಿ ಶುಲ್ಕ- ರೂ 50 /-

ಸಕ್ರಮೀಕರಣ/ಮೂಲಸೌಕರ್ಯ ರಚನ ಶುಲ್ಕ - ರೂ. 10,000/-

ಮೇಲ್ವಿಚಾರಣಾ ಶುಲ್ಕ-ರೂ. 150 /-

ಭದ್ರತಾ ಠೇವಣಿ (ರೂ.) (ಪ್ರತಿ ಹೆಚ್ ಪಿ ಗೆ)

| ವಿಸಕಂ | ಬೆಸ್ಕಾಂ | ಸೆಸ್ಕ್ | ಮೆಸ್ಕಾಂ | ಹೆಸ್ಕಾಂ | ಜೆಸ್ಕಾಂ |
|---|---|---|---|---|---|
| KERC ನಿಯಮಾವಳಿಯಂತೆ ಕಾಲಕಾಲಕ್ಕೆ ಅನ್ವಯವಾಗುವಂತೆ | | | | | |

---

**ಇ)** ರೈತರು ತಮ್ಮ ಹೊಲಗಳಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಸರ್ಕಾರ ವಿಧಿಸುತ್ತಿರುವ ಶುಲ್ಕವೆಷ್ಟು: ಈ ಹಿಂದೆ ಇದ್ದ ಶುಲ್ಕವೆಷ್ಟು: ಶುಲ್ಕದ ಪ್ರಮಾಣ ಹೆಚ್ಚಾಗಿರುವ ಕಾರಣ ರೈತರು ಅಕ್ರಮ ವಿದ್ಯುತ್ ಸಂಪರ್ಕ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಶುಲ್ಕ ಕಡಿಮೆ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು:

ರೈತರು ಐ.ಪಿ ಸೆಟ್ ಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ತಮ್ಮ ಹೊಲಗಳಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಪಾವತಿಸಬೇಕಾಗಿರುವ ಶುಲ್ಕಗಳ ವಿವರ ಕೆಳಕಂಡಂತಿವೆ:

- 2023-24ನೇ ಸಾಲಿನಲ್ಲಿ, 22.09.2023ರವರೆಗೆ ಅಕ್ರಮ ಸಕ್ರಮ ಹಾಗೂ ಸಾಮಾನ್ಯ ಐ.ಪಿ ಸೆಟ್ ಗಳಿಗೆ ತಗಲುತ್ತಿದ್ದ ಶುಲ್ಕಗಳ ವಿವರ:

  ಅರ್ಜಿ ನೋಂದಣಿ ಶುಲ್ಕ-ರೂ 50 /-

  ಸಕ್ರಮೀಕರಣ/ ಮೂಲಸೌಕರ್ಯ ರಚನೆ ಶುಲ್ಕ - ರೂ. 10,000 /-

  ಮೇಲ್ವಿಚಾರಣಾ ಶುಲ್ಕ-ರೂ. 150 /-

  ಭದ್ರತಾಠೇವಣಿ (ರೂ.) (ಪ್ರತಿ ಹೆಚ್ ಪಿ ಗೆ)

| ವಿಸಕಂ | ಬೆಸ್ಕಾಂ | ಸೆಸ್ಕ್ | ಮೆಸ್ಕಾಂ | ಹೆಸ್ಕಾಂ | ಜೆಸ್ಕಾಂ |
|---|---|---|---|---|---|
| ರೂ | 1130 | 1380 | 1380 | 1430 | 1490 |

- ರೈತರಿಗೆ ಅನುಕೂಲ ಮಾಡಿಕೊಡಲು ದಿನಾಂಕ:15.04.2025 ರಂದು ನವೀಕೃತ ಶೀಘ್ರ ಸಂಪರ್ಕ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಅದರಂತೆ HT/LT ಮಾರ್ಗ ನಿರ್ಮಿಸಿಕೊಳ್ಳುವ ರೈತರಿಗೆ ವಿಸಕಂಗಳಿಂದ ಉಚಿತವಾಗಿ ಪರಿವರ್ತಕವನ್ನು ತಾಂತ್ರಿಕಸಾಧ್ಯತೆಗನುಗುಣವಾಗಿ ಒದಗಿಸಲಾಗುತ್ತಿದೆ. ಸದರಿ ಆದೇಶದಂತೆ ಮತ್ತು ಕ.ವಿ.ನಿ.ಆಯೋಗರವರ ವಿದ್ಯುಚ್ಛಕ್ತಿ ದರ ಆದೇಶ ದಂತೆ 10 ಹೆಚ್ ಪಿ ಮತ್ತು 10 ಹೆಚ್ ಪಿ ಗಿಂತ ಕಡಿಮೆ ಇರುವ ನೀರಾವರಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಸಂದಾಯ ಮಾಡಬೇಕಾಗಿರುವ ಶುಲ್ಕಗಳು ಕೆಳಕಂಡಂತಿವೆ:

  ಅರ್ಜಿ ನೋಂದಣಿ ಶುಲ್ಕ: ರೂ.50/- + ಜಿ ಎಸ್ ಟಿ ಮೊತ್ತ

  ಅಭಿವೃದ್ಧಿ ಶುಲ್ಕ: ರೂ.15,000/-

  ಭದ್ರತಾ (ಆರಂಭಿಕ) ಠೇವಣಿ (ರೂ.) (ಪ್ರತಿ ಹೆಚ್ ಪಿ ಗೆ):

| ವಿಸಕಂ | ಬೆಸ್ಕಾಂ | ಸೆಸ್ಕ್ | ಮೆಸ್ಕಾಂ | ಹೆಸ್ಕಾಂ | ಜೆಸ್ಕಾಂ |
|---|---|---|---|---|---|
| ರೂ | 1710 | 1710 | 1660 | 1710 | 1720 |

| | | |
|---|---|---|
| ಈ) | ಟ್ರಾನ್ಸ್‌ಫಾರ್ಮರ್ ಗಳು ದುರಸ್ಥಿಗೆ ಬಂದಾಗ: ಎಷ್ಟು ದಿನಗಳಲ್ಲಿ ದುರಸ್ತಿ ಮಾಡಿ ಅಳವಡಿಸಲಾಗುವುದು; | ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪರಿವರ್ತಕಗಳು ವಿಫಲಗೊಂಡ ತಕ್ಷಣ ಸದರಿ ಪರಿವರ್ತಕಗಳನ್ನು ದುರಸ್ತಿ ಕೇಂದ್ರಕ್ಕೆ ರವಾನಿಸುತ್ತಿದ್ದು, ಉಗ್ರಾಣ ಮತ್ತು ಪರಿವರ್ತಕ ಬ್ಯಾಂಕ್ ಗಳಲ್ಲಿ ದಾಸ್ತಾನಿನಲ್ಲಿ ಲಭ್ಯವಿರುವ ಪರಿವರ್ತಕಗಳನ್ನು ಉಪಯೋಗಿಸಿ ಕೆ.ಇ.ಆರ್.ಸಿ ನಿಯಮಾನುಸಾರ ನಗರ ಪ್ರದೇಶಗಳಲ್ಲಿ 24 ಗಂಟೆಗಳೊಳಗಾಗಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 72 ಗಂಟೆಗಳೊಳಗಾಗಿ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು, ವಿಫಲ ವಿದ್ಯುತ್ ವಿತರಣಾ ಪರಿವರ್ತಕಗಳನ್ನು ನಿಗಧಿತ ಅವಧಿಯಲ್ಲಿ ಬದಲಾಯಿಸುವುದು, ಸೂಕ್ತ ದಾಸ್ತಾನು ಖಾತ್ರಿ ಪಡಿಸಿಕೊಳ್ಳುವುದು ಇತ್ಯಾದಿಗಳ ಬಗ್ಗೆ ನಿಗಾವಹಿಸುವಂತೆ ವಿ.ಸ.ಕಂ. ಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ. |
| ಉ) | ಟ್ರಾನ್ಸ್‌ಫಾರ್ಮರ್ ಗಳು ದುರಸ್ಥಿಗೆ ಬಂದಾಗ ಇಂಧನ ಇಲಾಖೆಯವರು ವಿಳಂಬ ಮಾಡುವುದರಿಂದ ರೈತರ ಬೆಳೆಗಳಿಗೆ ನೀರು ಹಾಯಿಸಲು ತೊಂದರೆಯುಂಟಾಗುತ್ತಿರುವುದು. ಬೆಳೆಗಳು ನೀರಿಲ್ಲದೆ ಒಣಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೈತರ ಹೊಲದಲ್ಲಿ ತುರ್ತಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; | ವಿಫಲವಾದ ಪರಿವರ್ತಕಗಳನ್ನು ಶೀಘ್ರವಾಗಿ ದುರಸ್ತಿಗೊಳಿಸಲು ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ವಿದ್ಯುತ್ ಸರಬರಾಜು ಕಂಪನಿವಾರು ಪರಿವರ್ತಕ ದುರಸ್ತಿ ಕೇಂದ್ರಗಳ ವಿವರಗಳು ಕೆಳಕಂಡಂತಿದೆ:<br><br>**ವಿದ್ಯುತ್ ಸರಬರಾಜು ಕಂಪನಿ** — **ಪರಿವರ್ತಕ ದುರಸ್ತಿ ಕೇಂದ್ರಗಳ ಸಂಖ್ಯೆ**<br>ಬೆಸ್ಕಾಂ — 48<br>ಸೆಸ್ಕ್ — 29<br>ಹೆಸ್ಕಾಂ — 59<br>ಮೆಸ್ಕಾಂ — 16<br>ಜೆಸ್ಕಾಂ — 38<br>ಒಟ್ಟು — 190<br><br>ದುರಸ್ತಿಗೊಳಿಸಲಾದ ಟ್ರಾನ್ಸ್‌ಫಾರ್ಮರ್‌ಗಳ ದಾಸ್ತಾನನ್ನು ಉಪ ವಿಭಾಗಗಳಲ್ಲಿ ತೆರೆಯಲಾದ ಟ್ರಾನ್ಸ್‌ಫಾರ್ಮರ್ ಬ್ಯಾಂಕುಗಳು ಹಾಗೂ ಉಗ್ರಾಣಗಳಲ್ಲಿ ಸಂಗ್ರಹಿಸಿ ಅಗತ್ಯವಿದ್ದಲ್ಲಿ ತ್ವರಿತವಾಗಿ ಬಳಸಲಾಗುತ್ತಿದೆ.<br><br>ಮುಂದುವರೆದು, ಬೆಸ್ಕಾಂ ವ್ಯಾಪ್ತಿಯಲ್ಲಿ ದುರಸ್ತಿ ಕೇಂದ್ರವು ವಿಭಾಗೀಯ ಉಗ್ರಾಣದಿಂದ 50 ಕಿ.ಮಿ. ಮೇಲ್ಪಟ್ಟು ದೂರವಿದ್ದಲ್ಲಿ ಪರಿವರ್ತಕಗಳ ಬಫರ್ ಸ್ಟಾಕ್ ಇರಿಸಲು ಮತ್ತು ವಿಫಲವಾದ ಪರಿವರ್ತಕಗಳನ್ನು ಬದಲಾವಣೆ ಮಾಡಲು ಅನುಕೂಲವಾಗುವಂತೆ ಪರಿವರ್ತಕಗಳನ್ನು ಸಮೀಪದ ಉಪ ವಿಭಾಗಗಳಲ್ಲಿ ತೆರೆಯಲಾದ ಬ್ಯಾಂಕ್‌ಗಳಿಂದಲೇ ದುರಸ್ತಿಗೆ ನೀಡುವುದು ಮತ್ತು ಹಿಂಪಡೆಯಲು ಸೂಚಿಸಲಾಗಿದೆ. |
| ಊ) | ಕಳೆದ ಮೂರು ವರ್ಷಗಳಲ್ಲಿ ರೈತರ ಹೊಲದಲ್ಲಿ ಅಳವಡಿಸುವ ಕಂಬ/ವಿದ್ಯುತ್ ತಂತಿ ಸಮರ್ಪಕವಾಗಿ ಅಳವಡಿಸದೆ ತುಂಡರಿಸಿ ಬಿದ್ದ ತಂತಿಯಿಂದಾಗಿ ರೈತರು ಸಾವನ್ನಪ್ಪಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಸರ್ಕಾರ ಇವರಿಗೆ ನೀಡಿದ ಪರಿಹಾರದ ಮೊತ್ತವೆಷ್ಟು? | ಕಳೆದ ಮೂರು ವರ್ಷಗಳಲ್ಲಿ ವಿಸಕಂಗಳ ವ್ಯಾಪ್ತಿಯಲ್ಲಿ ರೈತರ ಹೊಲದಲ್ಲಿ ಅಳವಡಿಸುವ ಕಂಬ/ವಿದ್ಯುತ್ ತಂತಿ ಸಮರ್ಪಕವಾಗಿ ಅಳವಡಿಸದೆ ತುಂಡರಿಸಿ ಬಿದ್ದ ತಂತಿಯಿಂದಾಗಿ ರೈತರು ಸಾವನ್ನಪ್ಪಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ. |

ಸಂಖ್ಯೆ: ಎನರ್ಜಿ 218 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಹಾಗೂ ಪ್ರವಾಸೋದ್ಯಮ ಸಚಿವರು